ವಾರದ ಪತ್ರ

## ನೈಜತೆ ಮರೆತ ಪುರಾಣಗಳು

ಸಂಜೆ ಆಗುತ್ತಿದ್ದಂತೆಯೇ ಒಂದರ ಹಿಂದೆ ಒಂದರಂತೆ ಸಾಮಾಜಿಕ ಧಾರಾವಾಹಿಗಳನ್ನು ಇಂದು ಮುಗಿಯುತ್ತದೆ...ನಾಳೆ ಮುಗಿಯುತ್ತದೆ.. ಎಂದು ಬೇಸರದಿಂದ ನೋಡುತ್ತಿರುವಾಗ ಆರಂಭವಾದ ಪೌರಾಣಿಕ ಧಾರಾವಾಹಿಗಳಾದ ಶನಿ, ಮಹಾಕಾಳಿ, ಜೈ ಹನುಮಾನ್ ಮೊದಲಾದವುಗಳನ್ನು ವೀಕ್ಷಿಸಲು ಮುಂದಾದರು.

ಆದರೆ ದಿನಾಂಕ 8.10.2018 ರಂದು ಉದಯ ಕನ್ನಡ ವಾಹಿನಿಯಲ್ಲಿ ಆರಂಭವಾದ 'ಜೈ ಹನುಮಾನ್' ಪೌರಾಣಿಕ ಧಾರಾವಾಹಿಯಲ್ಲಿ ಬ್ರಹ್ಮದೇವನೊಂದಿಗೆ ಕುಳಿತ ಸರಸ್ವತಿ ವೀಣೆಯೊಂದಿಗೆ ಕುಳಿತ ಚಿತ್ರ ಗಮನಿಸಿ. ನಿರ್ದೇಶಕರ ಕಣ್ತಪ್ಪಿ ತಂತಿರಹಿತ ವೀಣೆಯನ್ನು ಸರಸ್ವತಿಯ ಕೈಯಲ್ಲಿ ಹಿಡಿದುಕೊಂಡ ದೃಶ್ಯ ಚಿತ್ರೀಕರಣವಾಗಿದೆ.

ಹಾಗೆಯೇ ಕಲರ್ಸ್ ಕನ್ನಡವಾಹಿನಿಯಲ್ಲಿ ಪ್ರಸಾರವಾಗುವ ಇನ್ನೊಂದು ಪೌರಾಣಿಕ ಧಾರಾವಾಹಿ 'ಶನಿ'ಯಲ್ಲಿಯೂ ಸಹ ವಿಷ್ಣುವಿಗೆ ಗಾಢವಾದ ನೀಲಿ ಬಣ್ಣ ಬಳಿದಿರುವುದು ತುಂಬಾ ಅಸಹ್ಯವಾಗದೆ.

ಈ ಹಿಂದೆ ಬಂದ ಹಿಂದಿ ಧಾರಾವಾಹಿ 'ರಾಮಾಯಣ'ದಲ್ಲಿ ರಾಮನ ಹಾಗೂ 'ಮಹಾಭಾರತ'ದಲ್ಲಿ ಕೃಷ್ಣನ ನೀಲವರ್ಣ ಪಾತ್ರಗಳು ಮನಸ್ಸಿಗೆ ಮುದನೀಡಿವೆ. ಟಿವಿ ವೀಕ್ಷಕರು ಪೌರಾಣಿಕ ಧಾರಾವಾಹಿಗಳತ್ತ ಆಸಕ್ತಿ ತೋರುತ್ತಿರುವ ಈ ಸಂದರ್ಭದಲ್ಲಿ ಪೌರಾಣಿಕ ಪಾತ್ರಗಳು ನೈಜತೆಯಿಂದ ಕೂಡಿರಲಿ.

— ರಘುನಾಥ ರಾವ್ ತಾಪ್ಸೆ, ದಾವಣಗೆರೆ

## ಇಬ್ಬರ ಸಹಿಯೂ ಬೇಕು!

'ಮಗಳು ಜಾನಕಿ'ಯಲ್ಲಿ ಜಾನಕಿ ಮತ್ತು ಅವಳ ಅಪ್ಪನ ಜಾಯಿಂಟ್ ಅಕೌಂಟ್ ಇರುತ್ತದೆ. ಅದರ ಹಣವನ್ನು ಅವಳ ಅಪ್ಪನೇ ಇವಳಿಗೆ ತಿಳಿಯದಂತೆ ಹಣವನ್ನು ತೆಗೆಯುತ್ತಾನೆ. ಪ್ರಸ್ತುತ ಕಾನೂನಿನ ಪ್ರಕಾರ ಹಣ ತೆಗೆಯಲು ಇಬ್ಬರ ಸಹಿಯೂ ಅವಶ್ಯ (ಕನಿಷ್ಠ ಕರ್ನಾಟಕದಲ್ಲಿ.. ನನಗೆ ತಿಳಿದಂತೆ). ಇದು ಸಿ. ಎಸ್. ಪಿ. ಸೃಷ್ಟಿಸಿರುವ ಧಾರಾವಾಹಿಗೆ ಅನ್ವಯಿಸುವುದಿಲ್ಲವೆ?

ಕಾನೂನನ್ನು ತುಂಬಾ ಎಚ್ಚರಿಕೆಯಿಂದ ವಿಶ್ಲೇಷಿಸುವ ಸಿ. ಎಸ್. ಪಿ. ಲಾಯರ್ ನಿರಂಜನ್ ಧಾವಳಿ ತನ್ನ ಮನೆಯಲ್ಲಿದ್ದವನೇ ಎಂಬುದನ್ನು ವೀಕ್ಷಕರಿಗೆ ತಿಳಿಸುವುದು ಬಿಟ್ಟು ತಾವೂ ಕತ್ತಲಿನಲ್ಲಿದ್ದಾರೆ ಮತ್ತು ವೀಕ್ಷಕರನ್ನೂ ಆಟವಾಡಿಸುತ್ತಿದ್ದಾರೆ!

—ಅನಂತ ಪದ್ಮನಾಭ ಎಚ್. ಎಂ., ಮೈಸೂರು

## ಅಸಂಗತ

ಝೀ ವಾಹಿನಿಯಲ್ಲಿ ಪ್ರಸಾರವಾಗುತ್ತಿರುವ 'ಜೋಡಿ ಹಕ್ಕಿ' ಧಾರಾವಾಹಿಯು ವೀಕ್ಷಕರ ದಾರಿ ತಪ್ಪಿಸುತ್ತಿದೆ. ಸರ್ಕಾರಿ ನೌಕರಳಾದ ಜಾನಕಿ ಟೀಚರ್ ಶಾಲೆಗೆ ಹೋದಾಗ ಹೆಡ್ ಮಾಸ್ಟರ್ 'ನಿಮ್ಮನ್ನು ಕೆಲಸದಿಂದ ತೆಗೆದು ಹಾಕಿದ್ದಾರೆ' ಎಂದು ದಡ್ಡರಂತೆ ಹೇಳುತ್ತಾರೆ. ಅದೇಕೆ ಎಂದು ವಿಚಾರಿಸಿದಾಗ ಮೇಲಧಿಕಾರಿಗಳನ್ನು ಕೇಳಲು ಹೇಳುತ್ತಾರೆ. ಸರ್ಕಾರಿ ನೌಕರರನ್ನು ವಿಚಾರಣೆಯಿಲ್ಲದೆ ಹೇಗೆ ಕೆಲಸದಿಂದ ತೆಗೆಯುತ್ತಾರೋ ನಿರ್ದೇಶಕರೇ ಉತ್ತರ ನೀಡಬೇಕು. ಕೊನೆಗೆ ಜಾನಕಿ ಟೀಚರು ತನ್ನ ಸರ್ಟಿಫೀಕೇಟ್ ಗಳನ್ನು ಕೊಡಿ ಎಂದು ಕೇಳುತ್ತಾರೆ. ಹೆಡ್ ಮಾಸ್ಟರ್ ಬಳಿ ಇವರ ಸರ್ಟಿಫೀಕೇಟ್ ಹೇಗೆ ಇರಲು ಸಾಧ್ಯ. ನೇಮಕಾತಿ ಮಾಡಿಕೊಂಡ ನಂತರ ಅವುಗಳನ್ನು ಅವರಿಗೇ ವಾಪಸ್ಸು ನೀಡಿರುತ್ತಾರೆ ಅಲ್ಲವೇ?

—ಪ.ಚಂದ್ರಕುಮಾರ ಗೌನಹಳ್ಳಿ, ಚಿತ್ರದುರ್ಗ

## ಅಚ್ಚುಕಟ್ಟಾದ 'ಮಗಳು..'

ಧಾರಾವಾಹಿಗಳು ಅನಗತ್ಯವಾಗಿ ಕತೆಯನ್ನು ಎಳೆಯುವುದು ಸಾಮಾನ್ಯ. ಆದರೆ ಟಿ.ಎನ್. ಸೀತಾರಾಂ ಅವರ 'ಮಗಳು ಜಾನಕಿ' ಭಿನ್ನ. ಅದನ್ನು ಉಳಿದವರು ಮಾದರಿಯಾಗಿ ತೆಗೆದುಕೊಳ್ಳಬೇಕಾದ ಅವಶ್ಯಕತೆಯಿದೆ. ಚಿತ್ರ ಕಥೆಯ ಅನಗತ್ಯ ಎಳೆದಾಟವೇ ಟಿ.ವಿ. ಮಾಧ್ಯಮ ತನ್ನ ಪ್ರೇಕ್ಷಕರನ್ನು ಕಳೆದುಕೊಳ್ಳುವಂತೆ ಮಾಡುತ್ತಿದೆ.

'ಮಗಳು ಜಾನಕಿ' ಅಚ್ಚುಕಟ್ಟಾಗಿ ಎಲ್ಲರ ಮೆಚ್ಚಿಗೆ ಪಡೆದಿದ್ದಾಳೆ. ಕೊನೆಯವರಿಗೂ ಇದೇ ಅಚ್ಚುಕಟ್ಟು, ಅಂದ ಉಳಿಸಿಕೊಳ್ಳಲು ಅವಳೂ 'ಮಿತಿ' ಮೀರಬಾರದು. ಸೀತಾರಾಂ ಅವರು ಈಗಲೇ ಇಂತಿಷ್ಟು ಕಂತುಗಳಲ್ಲಿ ಕತೆ ಮುಗಿಯುತ್ತದೆ ಎಂದು ನಿರ್ಧರಿಸಿ ವೀಕ್ಷಕರಿಗೆ ತಿಳಿಸಿದರೆ ಮುಗಿಯುವ ಒಂದೊಂದು ಓವರ್ ಕುತೂಹಲ ಹೆಚ್ಚಿಸಿ ಉಸಿರುಬಿಗಿ ಹಿಡಿಯುವಂತೆ ಮಾಡುವ ಟ್ವೆಂಟಿ ಟ್ವೆಂಟಿ ಕ್ರಿಕೆಟ್ ಆಟದಂತೆ ಕುತೂಹಲ ಹೆಚ್ಚಿಸಿ ಒಂಬತ್ತೂವರೆಗೆ ಕಾಯುವಂತೆ ಆಗುತ್ತದೆ.

ಮಾನವ ಸಂಬಂಧಗಳ, ಅತಿ ಸೂಕ್ಷ್ಮ ಸಂವೇದನೆಗಳ, ನಾಟಕೀಯ ತಿರುವುಗಳ, ಪ್ರತಿ ಸಂಚಿಕೆಯಲ್ಲೂ ಮುಂದೇನಾಗಬಹುದೆಂಬ ಕುತೂಹಲ ಉಳಿಸಿಕೊಳ್ಳುತ್ತಿರುವ ಧಾರಾವಾಹಿ ಇದು.

— ಸೀಮಾ ಪೋನಪ್ಪ, ಪುತ್ತೂರು; ಸತ್ಯಬೋಧ;
ಮ. ಕುಮಾರಸ್ವಾಮಿ, ಬೆಂಗಳೂರು

## ಜಗ್ಗಾಟದ 'ರಾಧಾ ರಮಣ'

ಕಲರ್ಸ್ ಕನ್ನಡ ವಾಹಿನಿಯಲ್ಲಿ ಮೂಡಿಬರುತ್ತಿರುವ 'ರಾಧಾ ರಮಣ' ಧಾರಾವಾಹಿ ಆರಂಭಿಕ ದಿನಗಳಲ್ಲಿ ಎಲ್ಲದಕ್ಕಿಂತ ವಿಭಿನ್ನವಾಗಿದೆ ಎಂದೆನಿಸಿತ್ತು. ಅಷ್ಟೇ ಅಲ್ಲ ನೋಡುಗರಲ್ಲಿ ಕೂಡ ಕುತೂಹಲ ಮೂಡಿಸಿತ್ತು.

ಆದರೆ ವಾರದಿಂದ ವಾರಕ್ಕೆ ಕತೆ ಸಾಗಿದಂತೆ ಇದರಲ್ಲೂ ಅವಾಸ್ತವಿಕ ಘಟನೆಗಳು, ಅವೇ ದೃಶ್ಯಗಳ ಪುನರಾವರ್ತನೆ, ಜಗ್ಗಾಟ, ಹಳಸಲು ಸಂಭಾಷಣೆಗಳಿಂದಾಗಿ ಈ ಧಾರಾವಾಹಿ ಕೂಡ ತನ್ನ ಮುಂಚಿನ ವಿಶಿಷ್ಟತೆಯನ್ನು ಕಳಚಿಕೊಳ್ಳುತ್ತ ಮಾಮೂಲಿ ಧಾರಾವಾಹಿ ಸಾಲಿಗೆ ಸೇರ್ಪಡೆಯಾದರೆ ಅಚ್ಚರಿ ಪಡಬೇಕಾಗಿಲ್ಲ.

— ಅರವಿಂದ. ಜಿ.ಜೋಷಿ. ಮೈಸೂರು

## ಸಾವಿನ ಅತಿರೇಕ

ಕಲರ್ಸ್ ಕನ್ನಡದ 'ಪುಟ್ಟಗೌರಿ ಮದುವೆ'ಯಲ್ಲಿ ಅಜ್ಜಮ್ಮ ಮೃತಪಟ್ಟಿದ್ದಾರೆ. ಒಂದು ವಾರದಿಂದ ಸಾವಿನ ದೃಶ್ಯವನ್ನೇ ತೋರಿಸುತ್ತಿದ್ದಾರೆ. ಮನೆ ಮಂದಿಗೆಲ್ಲಾ ಎಷ್ಟು ಗ್ಲಿಸರಿನ್ ಬಾಟಲ್‌ಗಳನ್ನು ಉಪಯೋಗಿಸಿದ್ದಾರೊ? ಶವಯಾತ್ರೆಗೆ ನೂರಾರು ಜನ ಬರುವುದು, ಅಜ್ಜಮ್ಮನ ಬಾಯಿಗೆ ಅಕ್ಕಿಕಾಳು ಹಾಕುವುದು ಇದೆಲ್ಲ ಅತಿರೇಕ ಎನ್ನಿಸುತ್ತದೆ. ಇನ್ನುಮುಂದಾದರೂ ಇಂತಹ ದೃಶ್ಯಗಳನ್ನು ತೋರಿಸುವುದನ್ನು ಬಿಡಲಿ.

—ಮಾಲತಿ ಪುರುಷೋತ್ತಮ, ಬೆಂಗಳೂರು

## ಮನಮಿಡಿದ ಸಂದರ್ಭ

ಝೀ ಕನ್ನಡದ ಸರಿಗಮಪ ಆಡಿಷನ್‌ನಲ್ಲಿ ಕುರಿಗಾಯಿ ಗಾಯಕನನ್ನು ಬರಮಾಡಿಕೊಂಡ ರೀತಿ, ತೋರಿದ ಗೌರವ ಮನಮಿಡಿಯುವಂತಿತ್ತು. ತೀರ್ಪುಗಾರರು ಯುವಗಾಯಕನಿಗೆ ತಿಳಿಹೇಳಿದ ರೀತಿ ಇಷ್ಟವಾಯಿತು. ಆ ಸಂದರ್ಭ ತೀರ್ಪುಗಾರರ ಗೌರವವನ್ನೂ ಹೆಚ್ಚಿಸಿತು.

ಅದೇ ರೀತಿ ಗರ್ಭಿಣಿಯೊಬ್ಬರಿಗೆ ಸಾಂದರ್ಭಿಕವಾಗಿ ತೋರಿಸಿದ ಪ್ರೀತಿ, ವಾತ್ಸಲ್ಯ ವಾಹಿನಿಗೂ ಶೋಭೆಯನ್ನು ತಂದುಕೊಟ್ಟಿದೆ.

—ಎನ್.ಎಸ್.ಚಂದ್ರಶೇಖರ್ ಬೆಂಗಳೂರು